# ಕೊಡಗಿಗೆ ಒಲಿದ ಲಿಚಿ



ಬಾಯಲ್ಲಿ ನೀರೂರಿಸುವ ಹಣ್ಣು ಈ ಲಿಚಿ. ಕೊಡಗಿನ ವಾತಾವರಣವೂ ಈ ಬೆಳೆಗೆ ಪೂರಕವಾಗಿದೆ.

★ ಚಿತ್ರ- ಲೇಖನ:
**ಪುತ್ತರಿರ ಕರುಣ್ ಕಾಳಯ್ಯ**

ಕೊಡಗಿನಲ್ಲಿ ಬಾಳೆ, ಮಾವು, ಹಲಸು, ಕಿತ್ತಳೆ, ಸಪೋಟ, ಪಪ್ಪಾಯ, ದಾಳಿಂಬೆ, ರಾಮಫಲ ಹಾಗು ಸೀತಾಫಲ, ಅನನಾಸುಗಳಂತಹ ಹಲವು ಬೆಳೆಯ ಜೊತೆ ಕೆಲವೊಂದು ಅಪರೂಪದ ಹಣ್ಣುಗಳಾದ ಮ್ಯಾಂಗೋಸ್ಟಿನ್, ರಂಬುಟಾನ್ ಜೊತೆ ಜೊತೆಗಿರುವುದೇ ಒಳ್ಳೆಯ ಸುವಾಸನಾ ಭರಿತ ಸಿಹಿ ಹುಳಿ ಮಿಶ್ರಿತ ವಿದೇಶಿ ತಳಿಯ ಈ ಲಿಚಿ ಹಣ್ಣು. ಇತ್ತೀಚಿನ ದಿನಗಳಲ್ಲಿ ಕೊಡಗಿನ ನಾನಾ ಕಡೆ ಲಿಚಿ ಗಿಡವನ್ನು ಕಾಣಬಹುದು. ಪೌಷ್ಟಿಕಾಂಶ ಹೆಚ್ಚಿಗೆ ಹೊಂದಿರುವ ಹಣ್ಣುಗಳಲ್ಲಿ ಇದೂ ಒಂದು.

ದಕ್ಷಿಣ ಚೀನಾದ ಓಮನ್ ಪ್ರಾಂತದ ಮೂಲವಾಗಿದ್ದು ವಿದೇಶದ ಮ್ಯಾನ್ಮಾರ್, ವೆಸ್ಟಿಂಡೀಸ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಹವಾಯಿ, ಥಾಯ್ಲಂಡ್, ಹಾಂಕಾಂಗ್‌ಗಳಲ್ಲೂ ಹಾಗೂ ಬಿಹಾರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಪಂಜಾಬ್, ಹರಿಯಾಣ, ಅಸ್ಸಾಂ, ತ್ರಿಪುರ, ಒರಿಸ್ಸಾ, ತಮಿಳುನಾಡು ಲಿಚಿಯನ್ನು ಬೆಳೆಯಲಾಗುತ್ತಿದೆ.

ಸಮ ಶೀತೋಷ್ಣವಲಯಗಳಲ್ಲಿ ಉತ್ತಮ ಫಲ ನೀಡುವುದರಿಂದ ಕೊಡಗಿನ ವಾತಾವರಣವೂ ಲಿಚಿ ಬೆಳೆಗೆ ಉತ್ತಮವಾಗಿದೆ. ಬೀಜದಿಂದ ಗಿಡವನ್ನು ಬೆಳೆಸಿದರೆ ಫಲಸಾಗಲು ತುಂಬಾನೆ ವರ್ಷಗಳು ಆಗುವುದರಿಂದ ಅದರ ಕಡ್ಡಿಗಳಿಂದ ಕೃಷಿ ಮಾಡಿದ ಗಿಡಗಳನ್ನು ಬೆಳೆಸಿ 34ವರ್ಷಗಳಲ್ಲಿ ಫಸಲು ಬಿಡಲಿದೆಂದು ಕ್ರಷಿ ಸಂಶೋಧಕರು ಹೇಳುತ್ತಾರೆ. ದೇಶವಿದೇಶಗಳಲ್ಲಿ ವಾತಾವರಣಕ್ಕೆ ಅನುಸಾರವಾಗಿ ವರ್ಷದ ಬೇರೆ ಬೇರೆ ಸಮಯದಲ್ಲಿ ಲಿಚಿ ಹಣ್ಣು ಕುಯಿಲಿದೆ ಬಂದರೆ ಕೊಡಗಿನಲ್ಲಿ ಅಕ್ಟೋಬರ್ ಹಾಗೂ ನವಂಬರ್ ತಿಂಗಳಿಂದ ಮೇಲ್ಪಟ್ಟು ಹಣ್ಣು ಕುಯ್ಲಿಗೆ ಬರುತ್ತಿದೆ.

